**ಓ.ಎಸ್. ನಂ. 14/2016 ಡಿ.ಡಬ್ಲೂ-1 ಹೆಸರು - ಸಿದ್ದಶೆಟ್ಟಿ**

**ಸಾಕ್ಷಿಯನ್ನು ದಿನಾಂಕಃ 21/06/2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಸ್.ಎನ್.ಕೆ ವಾದಿ ಪರ ವಕೀಲರಿಂದಃ-**

1 ನೇ ಪ್ರತಿವಾದಿ ನನ್ನ ಅಣ್ಣ 3 ನೇ ಪ್ರತಿವಾದಿ ನನ್ನ ತಮ್ಮ. ಪ್ರಸ್ತುತ 1 ನೇ ಪ್ರತಿವಾದಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಸಿದ್ದಶೆಟ್ಟಿಯನ್ನು ಬೂದಯ್ಯನ ಸಿದ್ದಶೆಟ್ಟಿ ಯಂತಲೂ ಕರೆಯುತ್ತಿದ್ದರು ಎಂದರೆ ಸರಿ. ಸದರಿ 2 ಹೆಸರುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಹೆಸರುಗಳು ನನ್ನ ತಂದೆಗೆ ಇರಲಿಲ್ಲ ಎಂದರೆ ಸರಿ. ನನ್ನ ತಂದೆಯ ತಂದೆ ಹೆಸರು ಬೂದಯ್ಯ ಎಂದರೆ ಸರಿ. ನಂಜಶೆಟ್ಟಿ ನನ್ನ ತಮ್ಮನಾಗಿದ್ದು ಪ್ರಸ್ತುತ ಮೃತಪಟ್ಟಿರುತ್ತಾನೆ. ನಮ್ಮ ವಂಶದಲ್ಲಿ ನಂಜಶೆಟ್ಟಿ ಎಂದು ನನ್ನ ತಮ್ಮನನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎಂದರೆ ಸರಿ. ನನಗೆ ನಂಜುಂಡಾರಾಧ್ಯ ರವರ ಪರಿಚಯ ಇಲ್ಲ. ಅವರ ಮಗ ಕಾಶಿ ಆರಾಧ್ಯರ ಪರಿಚಯವು ಇಲ್ಲ. ವಾದಿ ಸದರಿ ಕಾಶಿ ಆರಾಧ್ಯರ ಮಗ ಎಂದರೆ ನನಗೆ ಗೊತ್ತಿಲ್ಲ. ನನಗೆ ಅವರ ಪರಿಚಯ ಇಲ್ಲ. ದಾವಾ ಸ್ವತ್ತು ಸ.ನಂ.407/1 ಹಾಗೂ 407/2 ಆಗಿದ್ದು ಅದು ನಂಜನಗೂಡು ಹಳ್ಳಿಯಲ್ಲಿ ಇರುತ್ತದೆ.

ದಾವಾ ಸ್ವತ್ತನ್ನು ನನ್ನ ತಂದೆ ನಂಜುಂಡಾರಾಧ್ಯ ರವರಿಂದ ಖರೀದಿಸಿರುತ್ತಾರೆ. ಖರೀದಿ ಸಮಯದಲ್ಲಿ ನಾನಾಗಲೀ ನನ್ನ ತಮ್ಮನಾಗಲಿ ಇರಲಿಲ್ಲ. ನನ್ನ ತಂದೆ ಸದರಿ ದಾವಾ ಸ್ವತ್ತನ್ನು ಯಾವಾಗ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಲಕ್ಕಯ್ಯ ಎಂಬುವವರ ಪರಿಚಯ ನನಗೆ ಇಲ್ಲ. ಲಕ್ಕಯ್ಯನ ಹೆಂಡತಿ ಪಾರ್ವತಮ್ಮಳ ಪರಿಚಯ ಇಲ್ಲ. ಅವರ ಮಕ್ಕಳ ಪರಿಚಯವು ಇಲ್ಲ. ನನ್ನ ತಂದೆ ಖರೀದಿಸಿದ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ರಾಘವೇಂದ್ರ ರವರ ಸ್ವತ್ತು ಇದ್ದು ಮೊದಲು ಹಳ್ಳ ಇತ್ತು. ಪಶ್ಚಿಮಕ್ಕೆ ಓಣಿ, ಉತ್ತರಕ್ಕೆ ರಾಘವೇಂದ್ರ ರವರ ಸ್ವತ್ತು, ದಕ್ಷಿಣಕ್ಕೆ ಪುಟ್ಟನಂಜಪ್ಪರವರ ಸ್ವತ್ತು ಇರುತ್ತದೆ. ನಿಡಿ-1 ರ ಪ್ರಕಾರವಾಗಿ ನಾನು ಮೇಲೆ ಹೇಳಿದ ಪ್ರಕಾರವಾಗಿ ಚಕ್ಕುಬಂದಿ ಇರುತ್ತದೆ. ದಾವಾ ಸ್ವತ್ತನ್ನು ನನ್ನ ತಂದೆ ಯಾವ ಮೊತ್ತಕ್ಕೆ ಖರೀದಿಸಿದ್ದಾರೆ ಎಂದು ಗೊತ್ತಿಲ್ಲ. ನಂಜುಂಡಾರಾಧ್ಯರವರು ದಾವಾ ಸ್ವತ್ತನ್ನು ಯಾರಿಗೆ ಭೋಗ್ಯಕ್ಕೆ ನೀಡಿದ್ದರು

ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಕ್ರಯಪತ್ರದಲ್ಲಿ ಇದೆ ನೋಡಿ ಎನ್ನುವರು. ದಾವಾ ಸ್ವತ್ತನ್ನು ನಂಜುಂಡಾರಾಧ್ಯ ರವರು ಬೆಂಗಳೂರಿನ ಆರ್.ಕೆ ಜಮದಗ್ನಿ ರವರಿಗೆ ಭೋಗ್ಯ ಮಾಡಿದ್ದರು ಎಂದು ನಿಡಿ-1 ರಲ್ಲಿ ನಮೂದು ಮಾಡಿದೆ ಎಂದರೆ ಸರಿ. ನಿಡಿ-1 ನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಜಮದಗ್ನಿರವರಿಗೆ ಎಷ್ಟಕ್ಕೆ ಭೋಗ್ಯ ಅಗಿದೆ ಎಂದು ನನಗೆ ಗೊತ್ತಿಲ್ಲ. ಭೋಗ್ಯದ ಹಣವನ್ನು ನನ್ನ ತಂದೆ ತೀರಿಸಿರುತ್ತಾರೆ. ಭೋಗ್ಯದ ಪತ್ರ ನಮ್ಮ ಬಳಿ ಇರುವುದಿಲ್ಲ. ಭೋಗ್ಯ ತೀರುವಳಿ ಮಾಡಿದ ಬಗ್ಗೆ ಯಾವುದೇ ಪತ್ರ ಇರುವುದಿಲ್ಲ. ನಿಡಿ-1 ರಲ್ಲಿ ನಮೂದಿಸಿದಂತೆ ಪಂಚಾಯ್ತಿ ಒಪ್ಪಂದ ಪತ್ರ ನಮ್ಮ ಬಳಿ ಇರುವುದಿಲ್ಲ. ಕ್ರಯದ ಪತ್ರ ನೊಂದಣಿ ಆದ ನಂತರ ಉಳಿಕೆ ಹಣ ನಂಜುಂಡಾರಾಧ್ಯರವರಿಗೆ ನೀಡಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ದಾವಾ ಸ್ವತ್ತನ್ನು ನಂಜುಂಡಾರಾಧ್ಯರವರಿಂದ ನನ್ನ ತಂದೆ ಕೊಂಡುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂಜುಂಡಾರಾಧ್ಯರವರು ಯಾವುದೇ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ತೋರಿಸಿರುವ ಚಕ್ಕುಬಂದಿ ಅಸ್ತಿತ್ವದಲ್ಲಿ ಇಲ್ಲದೇ ಇರುವ ಆಸ್ತಿಯ ಚಕ್ಕುಬಂದಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪಶ್ಚಿಮಕ್ಕೆ ಸರ್ಕಾರಿ ರಸ್ತೆ ಇದೆ ಎಂದರೆ ಸರಿ. ಸ.ನಂ.406 ದಾವಾ ಸ್ವತ್ತಿನ ಉತ್ತರಕ್ಕೆ ಇರುವ ರಾಘವೇಂದ್ರ ರವರ ಜಮೀನು ಎಂದರೆ ಸರಿ. ಸ.ನಂ.408 ಮತ್ತು 416 ದಾವಾ ಸ್ವತ್ತಿನ ದಕ್ಷಿಣಕ್ಕೆ ಬರುತ್ತದೆ ಎಂದರೆ ಸರಿ.

ನನಗೆ ಈ ಪ್ರಕರಣದ ನೋಟಿಸು ಬಂದ ನಂತರ ದಾವಾ ಸ್ವತ್ತಿನ ಖಾತೆ ಬದಲಾಗಿಲ್ಲ ಎಂದು ತಿಳಿದು ಬಂದಿರುತ್ತದೆ. ನನ್ನ ತಂದೆ ಕಾಲವಾದ ನಂತರದಿಂದ ನನ್ನ ಗಮನಕ್ಕೆ ಬರುವ ಸಮಯದ ವರೆಗೆ ದಾವಾ ಸ್ವತ್ತಿನ ಆರ್.ಟಿ.ಸಿ ಯನ್ನು ಪಡೆದಿರುತ್ತೇನೆ. 1975-76 ರಲ್ಲಿ ನಮ್ಮ ತಂದೆಗೆ ಯಾವುದೇ ಕ್ರಯ ಪತ್ರ ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-2 ರಲ್ಲಿ ಸಿದ್ದಶೆಟ್ಟಿ ಮಗ ಸಿದ್ದಯ್ಯ ಎಂದು ಇದ್ದು, ಒಂದು ವೇಳೆ ನಿಡಿ-1 ರಂತೆ ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದಲ್ಲಿ ನಂಜಶೆಟ್ಟಿಯ ಮಗ ಸಿದ್ದಯ್ಯ ಎಂದು ಬರೆಬೇಕಿದ್ದು ಎಂದರೆ ಸರಿ. ಆರ್.ಟಿ.ಸಿ ಗಳಲ್ಲಿ ನಮೂದಿಸಿರುವುದಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ

ತಂದೆ ನಂಜಶೆಟ್ಟಿಯ ಮಗ ಸಿದ್ದಶೆಟ್ಟಿ ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ. 2015 ರಲ್ಲಿ ಆರ್.ಟಿ.ಸಿ ವಾದಿಯ ಹೆಸರಿಗೆ ಬದಲಾದ ವಿಚಾರ ತಿಳಿದ ನಂತರ ಎ.ಸಿ ನ್ಯಾಯಾಲಯದಲ್ಲಿ ಏಕೆ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಾಗಿಲ್ಲ ಎನ್ನುವರು.

ದಾವಾ ಸ್ವತ್ತು ವಾದಿಗಳ ಪಿತ್ರಾರ್ಜಿತ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಅವರ ತಾಯಿ ಮತ್ತು ಅವರ ಸಹೋದರ ವಾದಿಗೆ ನಿಪಿ-1 ರಂತೆ ಹಕ್ಕು ಖುಲಾಸೆ ಮಾಡಿಕೊಟ್ಟಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಅದಾದ ನಂತರ ವಾದಿಯ ಹೆಸರಿಗೆ ಖಾತೆಯಾಗಿ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನಾವೇ ಸ್ವಾಧೀನದಲ್ಲಿ ಇದ್ದೇವೆ ಎನ್ನುವರು. ನಾನು ನಮ್ಮ ಕುಟುಂಬದವರು ಹಾಗೂ ನಮ್ಮ ಊರಿನವರು ಸೇರಿ ಈ ದವಾವೆ ಸಲ್ಲಿಸುವ ವೇಳೆ ವಾದಿಗೆ ಬೆದರಿಕೆ ಹಾಕಿ ದಾವಾ ಸ್ವತ್ತಿನಿಂದ ಖಾಲಿ ಮಾಡಲು ಪ್ರಯತ್ನ ಪಟ್ಟಿರುತೆತೇವೆ ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ವಾದಿ ನನ್ನ ಹಾಗೂ ನನ್ನ ಅಣ್ಣ ತಮ್ಮದಿಂದ ವಿರುದ್ಧ ನಿಪಿ-15 ರಂತೆ ದೂರು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಪೋಲಿಸರು ಕರೆಸಿ ಯಾವುದೇ ತಂಟೆ ತಕರಾರಿಗೆ ಹೋಗದಂತೆ ತಿಳಿಸಿದರೂ ಸಹ ನಿರಂತರವಾಗಿ ನಾವು ವಾದಿಗಳಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ನಿಡಿ-34 ರಿಂದ 46 ನ್ನು ನಂಜನಗೂಡಿನ ಫೋಟೊ ನಾಗರಾಜು ಎಂಬುವರು ತೆಗೆದಿರುತ್ತಾರೆ. ಪ್ರಸ್ತುತ ಅವರು ಈಗ ಜೀವಂತ ಇರುತ್ತಾರೆ. ನಿಡಿ-34 ರಿಂದ 46 ನ್ನು ತೆಗೆದ ದಿನಾಂಕ ಮತ್ತು ಸಮಯ ನನಗೆ ಗೊತ್ತಿಲ್ಲ. ನಿಡಿ-34 ರಿಂದ 46 ರಲ್ಲಿ ಇರುವವರು ಎಲ್ಲಾ ನಮ್ಮ ಕುಟುಂಬದವರೆ. ಟ್ರಾಕ್ಟರ್ ಟ್ರೆಲ್ಲರ್ ಚಾಲನೆ ಮಾಡುತ್ತಿರುವವರು ನಮ್ಮ ಊರಿನವರೇ ಆಗಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ನಿಡಿ-34 ರಿಂದ 46 ರಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದ ಫೋಟೊ ಅಲ್ಲ ಎಂದರೆ ಸರಿಯಲ್ಲ. ಎಲ್ಲಾ ಫೋಟೊಗಳನ್ನು ಒಂದೇ ಸಮಯದಲ್ಲಿ ತೆಗೆಯಲಾಗಿದೆ ಎಂದರೆ ಸರಿ. ನಿಡಿ-34 ರಿಂದ 46 ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ವಾದಿಗಳೇ ಮಾಲಿಕರಾಗಿದ್ದು ಅಂದಿನಿಂದ ವಾದಿಗಳೇ ಸ್ವಾಧೀನದಲ್ಲಿ ಇದ್ದಾರೆ

ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**